

بِسۡمِ اللّٰہِ الرَّحۡمٰنِ الرَّحِیۡمِ

# ಸಾತ್ವಿಕರಿಗೆ ಅಲ್ಲಾಹನೇ ಸತ್ಯ ಮಾರ್ಗದರ್ಶನ ನೀಡುತ್ತಾನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 10-02-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಮನುಷ್ಯನು ಲೌಕಿಕ ಚಟುವಟಿಕೆಗಳಲ್ಲಿ ಮುಳುಗುತ್ತಾ ಇರುವುದು ಇಂದು ಲೋಕದ ಎಲ್ಲೆಡೆಗಳಲ್ಲೂ ಕಂಡು ಬರುತ್ತದೆ. ಲೌಕಿಕ ಸಾಮಗ್ರಿಗಳನ್ನು ಗಳಿಸಲು ನೂಕುನುಗ್ಗಲು ನಡೆಯುತ್ತಾ ಇದೆ. ಅವುಗಳನ್ನು ಗಳಿಸಲು ಒಂದು ವೇಗದಾಟ ನಡೆಯುತ್ತಿದೆ. ಅಲ್ಲಾಹನಿಗೆ ಮತ್ತು ಧರ್ಮಕ್ಕೆ ದ್ವಿತೀಯ ಸ್ಥಾನ ನೀಡಲಾಗುತ್ತಿದೆ. ಅಲ್ಲಾಹನ ಅಸ್ತಿತ್ವವನ್ನೇ ಸಿರಾಕರಿಸುವ ಲೌಕಿಕರು ಅನೇಕರಿದ್ದಾರೆ. ಅವರ ಸಂಖ್ಯೆ ವರ್ಧಿಸುತ್ತಾ ಇದೆ. ಅವರು ಧರ್ಮವನ್ನು ನಊದುಬಿಲ್ಲಾಹ್ ಒಂದು ಲಘು ವಸ್ತು ಎಂದು ಯೋಚಿಸುತ್ತಾರೆ. ಇಂತಹ ಕಾಲಘಟ್ಟದಲ್ಲಿ ಸಹ ಕೆಲವು ಜನರು ಹೇಗಿದ್ದಾರೆಂದರೆ, ಅವರು ಅಲ್ಲಾಹನನ್ನು ಅನ್ವೇಷಿಸುತ್ತಿದ್ದಾರೆ. ಅಲ್ಲಾಹನ ಕಡೆಗೆ ಒಯ್ಯುವಂತಹ ಧರ್ಮವನ್ನು ಅವರು ಹುಡುಕುತ್ತಾ ಇರುತ್ತಾರೆ. ಅವರು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸಲು ಇಚ್ಛಿಸುತ್ತಿದ್ದಾರೆ. ಅವರು ಸತ್ಯ ಧರ್ಮ ಯಾವುದೆಂದು ಗುರುತಿಸಲು ಮತ್ತು ಅದರಲ್ಲಿ ಸೇರಲು ಬಯಸುತ್ತಿದ್ದಾರೆ. ಅವರು ಅದಕ್ಕೋಸ್ಕರ ಪ್ರಾರ್ಥಿಸುತ್ತಾ ಇರುತ್ತಾರೆ. ಅವರು ಸತ್ಯಧರ್ಮವನ್ನು ಗುರುತಿಸಲು ಆತಂಕ ಭರಿತರಾಗಿರುತ್ತಾರೆ. ಸಾತ್ವಿಕರಾದ ದಾಸರು ಒಂದು ನೋವಿನೊಂದಿಗೆ ಈ ರೀತಿ ಪ್ರಯತ್ನ ಮಾಡುವಾಗ ಖಂಡಿತವಾಗಿಯೂ ಅಲ್ಲಾಹನು ಸಹ ಅವರಿಗೆ ಮಾರ್ಗದರ್ಶನ ನೀಡುತ್ತಾನೆ. ಅವರಿಗೆ ನೇರಮಾರ್ಗವನ್ನು ಅಲ್ಲಾಹನು ತೋರಿಸುತ್ತಾನೆ. ಅವರು ಮಾನಸಿಕ ಸಮಾಧಾನ ಹೊಂದಲು ಮತ್ತು ಸತ್ಯಧರ್ಮವನ್ನು ಮನವರಿಕೆ ಮಾಡಲು ವಿವಿಧ ಮಾರ್ಗಗಳ ಮೂಲಕ ಅಲ್ಲಾಹನು ವ್ಯವಸ್ಥೆ ಮಾಡುತ್ತಾನೆ. ಅವರ ವಿಶ್ವಾಸವು ದೃಢವಾಗುವಂತೆ ಮಾಡುತ್ತಾನೆ. ಇಂದಿನ ಕಾಲಘಟ್ಟದಲ್ಲಿ ಅಲ್ಲಾಹನ ಸಾಮೀಪ್ಯ ಪಡೆಯಲು ಮತ್ತು ಅವನ ಧರ್ಮವನ್ನು ಮನವರಿಕೆ ಮಾಡಿಕೊಡಲು ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನನ್ನು ಮಸೀಹ್ ಮೌಊದ್ ಮತ್ತು ವಾಗ್ದತ್ತ ಮಹ್‌ದಿಯ ಸ್ಥಾನ ನೀಡಿ ಕಳುಹಿಸಿದನು. ನಿಮ್ಮ ವಾಸ್ತವಿಕ ಬೇಗುದಿಯನ್ನು ನಿವಾರಿಸಿ ಸಾಂತ್ವನ ಗಳಿಸಲು ಮಸೀಹ್ ಮೌಊದರನ್ನು ಬೈಅತ್ ಮಾಡಿ ಎಂದು ಹೇಳಿದನು. ಆ ಮೂಲಕ ಅಲ್ಲಾಹನ ಸಾಮೀಪ್ಯದ ಮಾರ್ಗಗಳನ್ನು ಗಳಿಸಿರಿ. ನಿಮ್ಮ ಆರಾಧನೆಗಳ ವಾಸ್ತವಿಕತೆಯನ್ನು ಅರಿಯಿರಿ. ಪ್ರಾರ್ಥನೆಗಳ ಅಂಗೀಕಾರದ ದೃಶ್ಯಗಳನ್ನು ನೋಡಿರಿ.

ಈಗ ನಾನು ಕೆಲವು ಘಟನೆಗಳನ್ನು ವಿವರಿಸುವೆನು. ಅಲ್ಲಾಹನು ಕೇವಲ ತನ್ನ ಅನುಗ್ರಹದ ಮೂಲಕ ಜನರಿಗೆ ಹೇಗೆ ಮಾರ್ಗದರ್ಶನ ನೀಡುತ್ತಾನೆಂದು ಅದರಿಂದ ಮನವರಿಕೆಯಾಗುತ್ತದೆ. ಗ್ಯಾಂಬಿಯಾ ದೇಶದ ಅಮೀರ್ ಸಾಹಿಬ್ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ: ನಿಯಾಮೀನ ಈಸ್ಟ್ ಡಿಸ್ಟ್ರಿಕ್ಟ್‌ಗೆ ಸೇರಿದ ಒಂದು ಗ್ರಾಮದ ನಿವಾಸಿ, 65 ವರ್ಷ ಪ್ರಾಯದ ಮಹಿಳೆ, ಸಿಸ್ಟರ್ ಕಾನೀಫಾಟಿ ಕಳೆದ ಹತ್ತು ವರ್ಷಗಳಿಂದ ಕಾಲುನೋವಿನಿಂದ ಪೀಡಿತರಾಗಿದ್ದರು. ಯಾವ ಚಿಕಿತ್ಸೆಯಿಂದಲೂ ಅವರಿಗೆ ಉಪಶಮನ ಲಭಿಸಲಿಲ್ಲ. ನೋವಿನ ಕಾರಣದಿಂದ ಅವರಿಗೆ ನಡೆದಾಡಲು ಸಾಧ್ಯವಿರಲಿಲ್ಲ. ಅವರು ತನ್ನ ರೋಗದ ಚಿಕಿತ್ಸೆಗೋಸ್ಕರ ತನ್ನ ಗ್ರಾಮದಿಂದ ಸ್ವಲ್ಪ ದೂರ ಇರುವ ಬೆನ್‌ಸಂಗ್ ಪ್ರದೇಶಕ್ಕೆ ಹೋಗಿದ್ದರು. ಅಲ್ಲಿ ಅವರಿಗೆ ಎಂ.ಟಿ.ಎ ಮೂಲಕ ನನ್ನ ಖುತ್‌ಬ ಆಲಿಸುವ ಸಂದರ್ಭ ಲಭಿಸಿತು. ಆ ಮಹಿಳೆ ತನ್ನ ಗ್ರಾಮಕ್ಕೆ ಮರಳಿ ಬಂದಾಗ ಅವರು ಒಂದು ಸ್ವಪ್ನ ಕಂಡರು. ಅವರೊಂದಿಗೆ ಸ್ವಪ್ನದಲ್ಲಿ ಹೀಗೆ ಹೇಳಲಾಯಿತು: ನೀನು ಟಿ.ವಿ.ಯಲ್ಲಿ ಯಾರನ್ನು ನೋಡಿದೆಯೋ ಅವರನ್ನು ಅನುಸರಿಸು. ಏಕೆಂದರೆ ಅವರು ಸರಿಯಾದ ಮತ್ತು ಮೋಕ್ಷದ ಮಾರ್ಗ ತೋರಿಸುತ್ತಿದ್ದಾರೆ. ಈ ಸ್ವಪ್ನ ಕಂಡ ನಂತರ ಆ ಮಹಿಳೆ ಬೈಅತ್ ಮಾಡಿದರು. ಅವರು ಬೈಅತ್ ಮಾಡಿದ ನಂತರ ಅವರ ಕಾಲಿನ ನೋವು ಕಡಿಮೆಯಾಗುತ್ತಾ ಹೋಯಿತು. ಈ ಕಾರಣದಿಂದ ಅವರ ವಿಶ್ವಾಸ ಬಹಳ ವರ್ಧಿಸಿತು. ಈಗ ಆ ಮಹಿಳೆ ತನ್ನ ಗ್ರಾಮದಲ್ಲಿ ತಬ್ಲೀಗ್ ಮಾಡುತ್ತಾ ಇದ್ದಾರೆ. ಅಹ್ಮದಿಯಾ ಜಮಾಅತ್‌ಗೆ ಸೇರಿದಾಗ ದೊರೆತ ಅನುಗ್ರಹದ ಕಾರಣ ತನ್ನ ಕಷ್ಟ ಹೇಗೆ ನಿವಾರಣೆಯಾಯಿತೆಂದು ವಿವರಿಸುತ್ತಾ ಇದ್ದಾರೆ.

ಈ ರೀತಿ ಸ್ವಂತ ಅನುಭವ ಗಳಿಸಿದವರು ಮತ್ತು ಅಲ್ಲಾಹನ ಮಾರ್ಗದರ್ಶನ ಪಡೆದವರು ನಿಶ್ಚಯವಾಗಿಯೂ ತಮ್ಮ ವಿಶ್ವಾಸದಲ್ಲಿ ಬಲಿಷ್ಠರಾಗುತ್ತಾ ಮುಂದುವರಿಯುತ್ತಾರೆ. ನನಗೆ ಅನೇಕ ಜನರು ಪತ್ರ ಬರೆದು ತಿಳಿಸುತ್ತಿದ್ದಾರೆ- ಅಲ್ಲಾಹನಿಂದ ಸಾಂತ್ವನ ಪಡೆದು ಮತ್ತು ದೃಷ್ಟಾಂತಗಳನ್ನು ಕಂಡು ಬೈಅತ್ ಮಾಡಿರುವೆವು ಎಂದು. ಅವರು ಹೇಳುತ್ತಾರೆ: ನಮ್ಮ ವಿಶ್ವಾಸವನ್ನು ಅಲುಗಾಡಿಸಲು ಯಾರಿಗೂ ಸಾಧ್ಯವಿಲ್ಲ. ನಮಗೆ ಹೆಚ್ಚು ಸಾಕ್ಷ್ಯಾಧಾರಗಳ ಆವಶ್ಯಕತೆ ಇಲ್ಲ.

ಕೆಲವು ಜನರು ವಿರೋಧದಲ್ಲಿ ಎಷ್ಟು ಹಟಮಾರಿಗಳಾಗಿರುತ್ತಾರೆಂದರೆ ಅವರು ವಿವೇಕಭರಿತ ಮಾತುಗಳನ್ನು ಆಲಿಸಲು ಇಚ್ಛಿಸುವುದೇ ಇಲ್ಲ. ಆದರೆ ಬೇರೆ ಕೆಲವರು ದುರಹಂಕಾರಿಗಳಾಗಿರುವುದಿಲ್ಲ. ಅವರಲ್ಲಿ ಸ್ವಲ್ಪಮಟ್ಟಿಗೆ ಮಾನವೀಯತೆ ಇರುತ್ತದೆ. ಇಂತಹ ಜನರಿಗೆ ಅಲ್ಲಾಹನು ಮಾರ್ಗದರ್ಶನ ನೀಡುತ್ತಾನೆ. ಅವರು ಅಲ್ಲಾಹನ ಮಾರ್ಗದರ್ಶನದಿಂದ ಲಾಭ ಪಡೆಯಲು ಪ್ರಯತ್ನಿಸುವುದಾದರೆ ಅವರು ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗುತ್ತಾರೆ.

ಇದೇ ರೀತಿಯ ಒಂದು ಘಟನೆ ಸಿರಿಯಾ ದೇಶದ ಅಹ್ಮದ್ ಸಾಹಿಬರಿಗೆ ಸಂಬಂಧಿಸಿದ್ದಾಗಿದೆ. ಅವರು ಮೊದಲು

ಬಹಳ ವಿರೋಧಿಸುವವರಾಗಿದ್ದರು. ಆದರೆ ಅನಂತರ ಸತ್ಯವನ್ನು ತಿಳಿಯಲು ಅಲ್ಲಾಹನಿಂದ ಮಾರ್ಗದರ್ಶನ ಪಡೆಯುವ ಯೋಚನೆ ಹೊಂದಿದರು. ಅವರು ಹೇಳುತ್ತಾರೆ: ಅಹ್ಮದಿಯರೊಂದಿಗೆ ನನಗೆ ನಿಕಟ ಸಂಪರ್ಕವಿತ್ತು. ಅವರೊಂದಿಗೆ ಭೇಟಿ ಸಹ ನಡೆಯುತ್ತಿತ್ತು. ಅವರು ನನ್ನ ಮನೆಗೆ ಬರುತ್ತಿದ್ದರು. ನಾನು ಅನೇಕ ವಿಷಯಗಳಿಗೆ ಸಂಬಂಧಿಸಿ ಅವರೊಂದಿಗೆ ಸಹಮತ ಹೊಂದಿದ್ದೆನು. ಆದರೆ ಈಸಾ ಮಸೀಹರ ಮರಣದ ಬಗ್ಗೆ ನನಗೆ ಭಿನ್ನಾಭಿಪ್ರಾಯವಿತ್ತು. ಅದಕ್ಕೆ ಕಾರಣವೇನೆಂದರೆ, ಈಸಾ ಮಸೀಹರು ಆಕಾಶದಿಂದ ಇಳಿದು ಬರುವರೆಂದು ಪ್ರತೀಕ್ಷೆ ನಾನು ದೀರ್ಘ ಕಾಲದಿಂದ ಹೊಂದಿದ್ದೆನು. ಈಸಾ ಮಸೀಹರ ಸೈನ್ಯದೊಂದಿಗೆ ಸೇರಿ ಬೈತುಲ್ ಮುಖದ್ದಸನ್ನು ಸ್ವತಂತ್ರಗೊಳಿಸುವ ಆಶೆ ನನಗೆ ದೀರ್ಘ ಕಾಲದಿಂದ ಇತ್ತು. ಈಸಾ ಮಸೀಹರು ಮೃತರಾಗಿರುವರೆಂಬ ವಿಷಯ ತಿಳಿದಾಗ ಜಿಹಾದ್ ಮಾಡಬೇಕೆಂಬ ನನ್ನ ಅಭಿಲಾಷೆಗಳು ನುಚ್ಚುನೂರಾದವು. ಈಸಾ ಮಸೀಹ್ ಆಕಾಶದಿಂದ ಇಳಿದು ಬರದಿದ್ದರೆ ನನಗೆ ಜಿಹಾದ್ ಮಾಡಲು ಸಾಧ್ಯವಾಗುವುದು ಹೇಗೆ? ಎಂಬ ಚಿಂತೆ ನನ್ನನ್ನು ಕಾಡುತ್ತಿತ್ತು. ಒಂದು ದಿವಸ ನನ್ನ ಮನೆಯಲ್ಲಿ ಕೆಲವು ಅಹ್ಮದಿಯರು ಕುಳಿತಿದ್ದರು. ಅವರಲ್ಲಿ ಖರುಖ್ ಸಾಹಿಬರೂ ಇದ್ದರು. ಅಲ್ಲಿ ಈಸಾ ಮಸೀಹರ ಮರಣದ ಬಗ್ಗೆ ಚರ್ಚೆ ಬಂದಾಗ ನಾನು ಹೇಳಿದೆ: ಅಹ್ಮದಿಯರಾದ ನಿಮ್ಮೊಂದಿಗೆ ಅಲ್ಲಾಹನಾಣೆ ಹಾಕಿ ಹೇಳುತ್ತೇನೆ: ಇನ್ನು ಮುಂದೆ ಈಸಾ ಮಸೀಹರ ವಫಾತ್ ಬಗ್ಗೆ ನನ್ನೊಂದಿಗೆ ಹೇಳಬೇಡಿರಿ. ಆಗ ಖರುಖ್ ಸಾಹಿಬರು ಹೇಳಿದರು: ನಾನು ಸಹ ನಿಮ್ಮೊಂದಿಗೆ ಒಂದು ಅಪೇಕ್ಷೆ ಮಾಡುತ್ತೇನೆ. ಈ ವಿಷಯದ ಬಗ್ಗೆ ಮಾರ್ಗದರ್ಶನ ನೀಡಬೇಕೆಂದು ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ ಎಂದು ಹೇಳಿದರು.

ಖರುಖ್ ಸಾಹಿಬರ ಮಾತು ನನಗೆ ಬಹಳ ಮೆಚ್ಚಿಗೆಯಾಯಿತು. ನಾನು ಅದೇ ದಿನ ಸಾಯಂಕಾಲದಿಂದ ಸುಜೂದ್‌ಗಳಲ್ಲಿ ಅಳುತ್ತಾ ಅಲ್ಲಾಹನೊಂದಿಗೆ ಪ್ರಾರ್ಥಿಸಲು ಪ್ರಾರಂಭಿಸಿದೆನು. ರಾತ್ರಿ ನಾನೊಂದು ಸ್ವಪ್ನ ಕಂಡೆನು. ನಾನು ಒಂದು ಎತ್ತರದ ಪ್ರದೇಶದ ಕಡೆಗೆ ನಡೆದು ಹೋಗುತ್ತಿದ್ದೇನೆ. ಮಾರ್ಗ ಮಧ್ಯದಲ್ಲಿ ಒಂದು ಜವುಗು ಪ್ರದೇಶ ಇದೆ. ಅಲ್ಲಿ ಕಾಲೂರಿದ ಕೂಡಲೆ ನನ್ನನ್ನು ಆಳವಾದ ಕಂದಕದ ಕಡೆಗೆ ಎಳೆದೊಯ್ಯುವ ಹಾಗೆ ಭಾಸವಾಯಿತು. ಇಂತಹ ಗಾಬರಿಯ ಪರಿಸ್ಥಿತಿಯಲ್ಲಿ ಒಬ್ಬರು ನನ್ನ ಭುಜವನ್ನು ಹಿಡಿದು ಮೇಲಕ್ಕೆತ್ತಿದರು. ಅವರು ಹೇಳಿದರು: 'ಅಬೂಹಸನ್, ಇನ್ನು ಮುಂದೆ ಖಂಡಿತವಾಗಿಯೂ ಇಲ್ಲಿಗೆ ಬರಬಾರದು. ಈಸಾ ಅಲೈಹಿಸ್ಸಲಾಮ್ ಮೃತರಾಗಿರುವರೆಂದು ದೃಢವಾಗಿ ನಂಬು.' ಅನಂತರ ಅವರು ಹೇಳಿದರು: ನೀನು ನಿನ್ನ ಮಾರ್ಗದಲ್ಲಿ ಚಲಿಸುತ್ತಾ ಹೋಗು. ನಾನು ನಿದ್ರೆಯಿಂದ ಎಚ್ಚೆತ್ತಾಗ ಅಹ್ಮದಿಯಾದ ನನ್ನ ಸಹೋದರನಿಗೆ ಫೋನ್ ಮಾಡಿ, ನಾನು ಖರುಖ್ ಸಾಹಿಬರ ಬಳಿಗೆ ಹೋಗಲು ಬಯಸುತ್ತೇನೆ ಎಂದು ಹೇಳಿದೆ. ನಾವಿಬ್ಬರೂ ಖರುಖ್ ಸಾಹಿಬರ ಮನೆಗೆ ಪ್ರವೇಶಿಸಿದಾಗ ಗೋಡೆಯಲ್ಲಿದ್ದ ಒಂದು ಫೋಟೋ ನೋಡಿ ನಾನು ವಿಸ್ಮಯಗೊಂಡೆನು. ನಾನು ಕೇಳಿದೆ: ಇದು ಯಾರ ಫೋಟೋ? ಇದು ವಾಗ್ದತ್ತ ಮಹ್‌ದೀ ಮಸೀಹರ ಚಿತ್ರ ಎಂದು ಅವರು ಹೇಳಿದರು. ಈ ಮಾತು ಆಲಿಸಿದ ಕೂಡಲೆ ನಾನು ಹೇಳಿದೆ: ನಾನು ಈಗಲೆ ಬೈಅತ್ ಮಾಡುತ್ತೇನೆ. ಏಕೆಂದರೆ ನನ್ನನ್ನು ಕೆಸರು ತುಂಬಿದ ಜವುಗು ಪ್ರದೇಶದಿಂದ ಹೊರಗೆತ್ತಿ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಮೃತರಾದರೆಂದು ಹೇಳಿದವರು ಇವರೇ ಆಗಿದ್ದಾರೆ.

ಇಂದಿನ ಕಾಲದಲ್ಲಿ ಅನೇಕ ಜನರು ಎಂ.ಟಿ.ಎ. ಮೂಲಕ ಸಹ ನೈಜ ಇಸ್ಲಾಮಿನ ಬಗ್ಗೆ ತಿಳಿದು ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸುತ್ತಿದ್ದಾರೆ. ಬೆನಿನ್ ದೇಶದ ಮುಬಲ್ಲಿಗ್ ಬರೆಯುತ್ತಾರೆ: ಒಂದು ಪ್ರದೇಶದ ಚೀಫ್ ಬಹುದೇವಾರಾಧಕ (ಮುಶ್ರಿಕ್) ಆಗಿದ್ದರು. ಅವರಿಗೆ ತಬ್ಲೀಗ್ ಮಾಡಿದಾಗ ಅವರು ಅಹ್ಮದಿಯರಾದರು ಮತ್ತು ನೈಜ ಇಸ್ಲಾಮಿನ ಅನುಷ್ಠಾನ ಕರ್ಮಗಳನ್ನು ಮಾಡಲು ತೊಡಗಿದರು. ಅವರ ಪ್ರದೇಶದಲ್ಲಿ ಒಂದು ಹೊಸ ಮಸ್‌ಜಿದ್ ಉದ್ಘಾಟಿಸಲಾಯಿತು. ಆ ಸಂದರ್ಭದಲ್ಲಿ ಅವರು ಹೀಗೆ ಭಾಷಣ ಮಾಡಿದರು:

ಅಹ್ಮದಿಯೇತರರು ಅಹ್ಮದಿಯಾ ಜಮಾಅತನ್ನು ಏಕೆ ವಿರೋಧಿಸುತ್ತಾರೆ ಎಂದು ನನಗೆ ತಿಳಿಯುವುದಿಲ್ಲ. ಇಂದು ಇಸ್ಲಾಮ್ ಧರ್ಮದ ಸಂದೇಶ ಲೋಕದ ಅಂಚುಗಳ ತನಕ ತಲಪಿಸುವ ಕೆಲಸವನ್ನು ಮಾಡುತ್ತಾ ಇರುವುದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ನಾನು ಒಂದು ವರ್ಷದ ಹಿಂದಿನ ತನಕ ಬಹುದೇವಾರಾಧಕನಾಗಿದ್ದೆ. ಬಹುದೇವಾರಾಧಕರ ರಾಜನಾಗಿದ್ದೆ. ಅಹ್ಮದಿಯಾ ಜಮಾಅತಿನ ಮುಬಲ್ಲಿಗ್ ನನ್ನ ಅಭಿಪ್ರಾಯವನ್ನು ಬದಲಾಯಿಸಿದರು ಮತ್ತು ಇಸ್ಲಾಮ್ ಧರ್ಮದ ನೈಜ ರೂಪವನ್ನು ನನಗೆ ತೋರಿಸಿದರು. ನಾನು ಮುಸ್ಲಿಮನಾದೆನು. ಕ್ರೈಸ್ತರನ್ನೂ ಬಹುದೇವಾರಾಧಕರನ್ನೂ ಅಹ್ಮದಿಯಾ ಜಮಾಅತ್ ಇಸ್ಲಾಮ್‌ಗೆ ತರುತ್ತಿದ್ದರೆ ನಿಮಗೆ ಅದರಿಂದ ಉಂಟಾಗುವ ಕಷ್ಟವಾದರೂ ಏನು? ಈ ಮಸ್‌ಜಿದ್ ಎಲ್ಲಾ ಜನರಿಗೆ ತೆರೆದಿಡಲಾಗಿದೆ. ಅಲ್ಲಾಹನನ್ನು ಆರಾಧಿಸಲು ಒಬ್ಬ ಕ್ರೈಸ್ತನು ಇದರೊಳಗೆ ಪ್ರವೇಶಿಸಲು ಬಯಸುವುದಾದರೆ ಅವನನ್ನು ತಡೆಯಲಿಕ್ಕಿಲ್ಲ. ನೀವು ವಿರೋಧದ ಭಾವನೆಗಳನ್ನು ಬಿಟ್ಟುಬಿಡಿರಿ. ಮತ್ತು ಒಳಗೆ ಬಂದು ನೋಡಿರಿ. ಇಲ್ಲಿ ಪ್ರೀತಿ, ಶಾಂತಿ ಮತ್ತು ಭ್ರಾತೃತ್ವದ ಪಾಠವನ್ನು ಪಡೆಯುವಿರಿ. ಅಹ್ಮದಿಯಾ ಜಮಾಅತ್ ಲೋಕಕ್ಕೆ ಒಳಿತನ್ನು ಮಾತ್ರ ಆಶಿಸುತ್ತಿದೆ. ನಾನು ಈ ಮಸ್‌ಜಿದ್‌ಗೆ ಸಮೀಪ ಒಂದು ಮನೆಯನ್ನು ನಿರ್ಮಿಸಬೇಕು ಮತ್ತು ಅಹ್ಮದಿಯಾ ಜಮಾಅತ್ ಸತ್ಯವಾದ ಇಸ್ಲಾಮ್ ಎಂದು ಇಲ್ಲಿಗೆ ಬರುವ ಪ್ರತಿಯೊಬ್ಬನೊಂದಿಗೆ ಹೇಳಬೇಕು ಎಂದು ಬಯಸುತ್ತೇನೆ.

ಒಂದು ಕಡೆ ಎಂತಹ ನಾಯಕರು ಮತ್ತು ಮತ ಪಂಡಿತರಿದ್ದಾರೆಂದರೆ ಅವರು ಇಸ್ಲಾಮ್ ಧರ್ಮದ ಹೆಸರಿನಲ್ಲಿ ಗಲಭೆಗೊಂದಲಗಳನ್ನು ಸೃಷ್ಟಿಸುತ್ತಿದ್ದಾರೆ. ಅವರು ದುರಹಂಕಾರದಿಂದ ಭರಿತರಾಗಿದ್ದಾರೆ. ತಮ್ಮ ಅಹಂಭಾವದ ಕಾರಣದಿಂದ ಮುಸ್ಲಿಮರ ಮೂಲಕ ಮುಸ್ಲಿಮರನ್ನು ಹತ್ಯೆ ಮಾಡುತ್ತಿದ್ದಾರೆ. ಇನ್ನೊಂದು ಕಡೆ ನೋಡಿರಿ, ಒಬ್ಬ ಬಹುದೇವಾರಾಧಕ ಮಾಡಿದ ಯಾವುದೋ ಸತ್ಕರ್ಮ ಅಲ್ಲಾಹನಿಗೆ ಇಷ್ಟಕರವಾಯಿತು ಮತ್ತು ಅವನು ಆ

ಬಹುದೇವಾರಾಧಕನಿಗೆ ಅನುಗ್ರಹ ನೀಡಿದನು. ಅವರನ್ನು ಇಸ್ಲಾಮಿನ ನೈಜ ಉಪದೇಶಗಳನ್ನು ಪ್ರಚಾರಗೊಳಿಸಲು ಮತ್ತು ಗಲಭೆಗೊಂದಲಗಳಿಂದ ರಕ್ಷಿಸಿಕೊಳ್ಳಲು ಹಾಗೂ ಇಸ್ಲಾಂ ಧರ್ಮದ ತತ್ವಗಳನ್ನು ಅನುಷ್ಠಾನಕ್ಕೆ ತರುವಂತೆ ಜನರನ್ನು ಪ್ರೇರೇಪಿಸಲು ಎದ್ದು ನಿಲ್ಲಿಸುತ್ತಾನೆ. ಇದು ಅಲ್ಲಾಹನ ಕೆಲಸವಾಗಿದೆ. ಮನುಷ್ಯನು ವಿನಯವಂತನಾದರೆ ಅಲ್ಲಾಹನು ಅವನಿಗೆ ಅನುಗ್ರಹ ನೀಡುತ್ತಾನೆ. ಆದರೆ ಯಾರು ಅಹಂಭಾವದಿಂದ ವರ್ತಿಸುತ್ತಾನೋ ಅವನು ಲಕ್ಷಗಟ್ಟಲೆ ನಮಾಝ್ ಮಾಡುವವನಾಗಿದ್ದರೂ ದುಆ ಮಾಡುವವನಾಗಿದ್ದರೂ, ತನ್ನನ್ನು ಸಾತ್ವಿಕನೆಂದು ಭಾವಿಸುವವನಾಗಿದ್ದರೂ, ಹಾಜಿಯಾಗಿದ್ದರೂ ಅವನಿಗೆ ಅಲ್ಲಾಹನಿಂದ ಮಾರ್ಗದರ್ಶನ ಲಭಿಸಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ನೈಜ ಇಸ್ಲಾಮನ್ನು ರುಚಿಸುವಾಗ ಜನರಲ್ಲಿ ಎಂತಹ ಬದಲಾವಣೆ ಉಂಟಾಗುತ್ತದೆ ಎಂಬುದರ ಬಗ್ಗೆ ಒಂದು ಘಟನೆಯನ್ನು ಒಬ್ಬ ಮುಬಲ್ಲಿಗ್ ಹೀಗೆ ವಿವರಿಸುತ್ತಾರೆ: ಕೆಮರೂನ್ ದೇಶದಲ್ಲಿ ಪ್ರಚಾರ ಮಾಡುತ್ತಿದ್ದಾಗ ಒಬ್ಬ ಮಾಜಿ ಸೈನಿಕ ಬೈಅತ್ ಮಾಡಿ ಅಹ್ಮದಿಯಾ ಜಮಾಅತನ್ನು ಪ್ರವೇಶಿಸಿದ್ದರು. ಅವರು ಲುಮ್‌ಯೂನ್ ಗೋತ್ರಕ್ಕೆ ಸೇರಿದವರಾಗಿದ್ದರು. ಅವರ ಸುಲ್ತಾನ್ ಕಳೆದ ವರ್ಷ ಯು.ಕೆ. ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ವರ್ಷ ಕೆಮರೂನಿಗೆ ಪುನಃ ಹೋದಾಗ ಆ ಮಾಜಿ ಸೈನಿಕನನ್ನು ಪುನಃ ಭೇಟಿಯಾದೆನು. ಅವರು ಹೇಳಿದರು– ಮಸ್‌ಜಿದ್ ನಿರ್ಮಾಣಕ್ಕೆ ನಾನು ಒಂದು ನಿವೇಶನ ಕೊಡುತ್ತೇನೆ ಎಂದು. ಹಾಗೆ ನಾನು ಮತ್ತು ಸದರ್ ಸಾಹಿಬರು ಆ ನಿವೇಶನವನ್ನು ನೋಡಲು ಹೋದೆವು. ಅಲ್ಲಿಗೆ ಹೋದಾಗ ಅಲ್ಲಿ ಒಂದು ತಳಪಾಯ ನಿರ್ಮಿಸಿರುವುದಾಗಿ ಕಂಡೆವು. ಆ ಮಾಜಿ ಸೈನಿಕ ಹೇಳಿದರು: ನನ್ನ ತಂದೆ ಮೃತರಾಗಿರುವರು. ಅವರು ಸ್ವಪ್ನದಲ್ಲಿ ನನಗೆ ತಿಳಿಸಿದರು– ನೀನು ಇಲ್ಲಿ ಮನೆ ನಿರ್ಮಿಸಬೇಡ. ಮಸ್‌ಜಿದ್ ನಿರ್ಮಿಸು ಎಂದು. ಆದುದರಿಂದ ಈ ನಿವೇಶನ ಮತ್ತು ಕಟ್ಟಡವನ್ನು ಅಹ್ಮದಿಯಾ ಜಮಾಅತ್‌ಗೆ ವರ್ಗಾಯಿಸಲು ನಾನು ಇಚ್ಛಿಸುತ್ತೇನೆ. ಇಲ್ಲಿ ಜಮಾಅತ್ ಮಸ್‌ಜಿದ್ ನಿರ್ಮಿಸಬಹುದು ಎಂದು ಹೇಳಿದರು. ಈ ನಿವೇಶನ ಅಂದಾಜು ಒಂದು ಸಾವಿರ ಚದರ ಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಅವರು ಈ ನಿವೇಶನವನ್ನು ಜಮಾಅತ್‌ಗೆ ವರ್ಗಾಯಿಸಿರುವರು. ಇನ್‌ಶಾಅಲ್ಲಾಹ್ ಅಲ್ಲಿ ಮಸ್‌ಜಿದ್ ನಿರ್ಮಿಸಲ್ಪಡುವುದು.

ಇನ್ನೊಂದು ಘಟನೆ ವಿವರಿಸುತ್ತೇನೆ: ಇಸ್ಲಾಮ್ ಬಗ್ಗೆ ನೋವನ್ನು ಹೊಂದಿದ ದೂರ ಪ್ರದೇಶದ ಒಬ್ಬ ಮನುಷ್ಯನ ಪ್ರಾರ್ಥನೆಯನ್ನು ಅಲ್ಲಾಹನು ಹೇಗೆ ಆಲಿಸಿದನು ಮತ್ತು ಇಸ್ಲಾಮಿನ ನೈಜ ಉಪದೇಶಗಳನ್ನು ವಿವರಿಸಿಕೊಡಲು ಒಬ್ಬ ಅಹ್ಮದಿ ಮುಬಲ್ಲಿಗರನ್ನು ಅವರ ಬಳಿಗೆ ಅಲ್ಲಾಹನು ಹೇಗೆ ಕಳುಹಿಸಿದನು ಎಂದು ನೋಡಿರಿ. ಐವರಿಕೋಸ್ಟ್ ದೇಶದ ಒಬ್ಬ ಮುಅಲ್ಲಿಮ್ ಬರೆಯುತ್ತಾರೆ: ಐವರಿಕೋಸ್ಟ್ ದೇಶದ ದೂರ ಪ್ರದೇಶದ ಒಂದು ಗ್ರಾಮವಾದ **ಯಾವುಕೋರೋದ** ನಿವಾಸಿ ಸಯೀದೂ ಸಾಹಿಬ್ ಹೇಳುತ್ತಾರೆ: ‘‘ಅವರ ಗ್ರಾಮಕ್ಕೆ ಇಸ್ಲಾಮ್ ಧರ್ಮ ಅವರ ಅಜ್ಜನವರ ಮೂಲಕ ಆಗಮಿಸಿತ್ತು. ಆದರೆ ಮೆಲ್ಲಮೆಲ್ಲಗೆ ಜನರು ಇಸ್ಲಾಮ್‌ನಿಂದ ದೂರ ಸರಿದರು. ಅಲ್ಲಿ ಇಸ್ಲಾಮ್ ಬರೇ ಹೆಸರಿನಲ್ಲಿ ಉಳಿಯಿತು. ಸಯೀದೂ ಸಾಹಿಬ್ ಹೇಳುತ್ತಾರೆ: ನಾನು ಬಹಳ ಹೆಚ್ಚಾಗಿ ಪ್ರಾರ್ಥನೆ ಮಾಡುತ್ತಿದ್ದೆ– ಈ ಗ್ರಾಮದ ನಿವಾಸಿಗಳು ನೈಜ ಇಸ್ಲಾಮನ್ನು ಅನುಷ್ಠಿಸುವವರಾಗಲಿ ಅದಕ್ಕೆ ಆವಶ್ಯಕವಾದ ವ್ಯವಸ್ಥೆ ಅಲ್ಲಾಹನು ಮಾಡಲಿ ಎಂದು. 2016ರ ರಮಝಾನ್ ತಿಂಗಳಲ್ಲಿ ನಾನು ಅಳುತ್ತಾ ಪ್ರಾರ್ಥಿಸಿದೆ. ಬಹಳ ನೋವಿನಿಂದ ಪ್ರಾರ್ಥಿಸಿದೆ. ಒಂದೆರಡು ದಿನ ಕಳೆದಾಗ ಅಹ್ಮದಿಯಾ ಜಮಾಅತಿನ ಮುಬಲ್ಲಿಗ್ ನಮ್ಮ ಗ್ರಾಮಕ್ಕೆ ಬಂದರು ಮತ್ತು ಅಹ್ಮದಿಯಾ ಜಮಾಅತನ್ನು ಪರಿಚಯಿಸಿದರು. ಈ ಘಟನೆ ನನ್ನ ವಿಶ್ವಾಸವನ್ನು ಬಹಳ ವರ್ಧಿಸುವುದಾಗಿತ್ತು. ಬಹಳ ದೂರ ಪ್ರದೇಶದಲ್ಲಿರುವ ನಮ್ಮ ಗ್ರಾಮಕ್ಕೆ ಒಬ್ಬ ದಾಈ ಇಲಲ್ಲಾಹ್ ಇಸ್ಲಾಮನ್ನು ಪುನಶ್ಚೇತನ ಗೊಳಿಸುವ ಸಂದೇಶದೊಂದಿಗೆ ಬಂದರು. ಮುಬಲ್ಲಿಗ್ ಸಾಹೇಬರ ಆ ಪರ್ಯಟನ ವೇಳೆಯಲ್ಲಿ ಇಲ್ಲಿ 55 ಜನರು ಬೈಅತ್ ಮಾಡಿ ಅಹ್ಮದಿಯಾದರು. ಅಹ್ಮದಿಯಾ ಜಮಾಅತಿನ ಮೂಲಕ ನಾವು ಇಂದು ಇಸ್ಲಾಮಿನ ಸರಿಯಾದ ತತ್ವಗಳನ್ನು ಅನುಷ್ಠಾನಕ್ಕೆ ತರುತ್ತಿದ್ದೇವೆ.’’

ನೀವು ಯೋಚಿಸಿರಿ, ಒಂದು ಕಡೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿರುವ ಜನರು ಧರ್ಮವನ್ನು ಮರೆತು ಲೌಕಿಕ ಸಾಮಗ್ರಿಗಳನ್ನು ಗಳಿಸಲು ನಿರತರಾಗಿದ್ದಾರೆ. ಇನ್ನೊಂದು ಕಡೆ ನೋಡಿರಿ, ಆಫ್ರಿಕದ ದೂರದ ಒಂದು ಗ್ರಾಮದಲ್ಲಿರುವ ವ್ಯಕ್ತಿ, ಆ ಗ್ರಾಮಕ್ಕೆ ಹೋಗಲು ಆಧುನಿಕ ರಸ್ತೆಗಳು ಸಹ ಪ್ರಾಯಶಃ ಇಲ್ಲ, ಅಲ್ಲಿ ಲೌಕಿಕ ಸುಖ ಸಂತೋಷಗಳು ಸಹ ಇಲ್ಲ, ಆ ವ್ಯಕ್ತಿ ಇಸ್ಲಾಮಿನ ಬಗ್ಗೆ ಒಂದು ಆವೇಶವನ್ನು ಹೃದಯದಲ್ಲಿ ಹೊಂದಿ ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಾರೆ, ಇಸ್ಲಾಮ್ ಧರ್ಮದ ಉಪದೇಶಗಳು ಇಲ್ಲಿ ಕೊನೆಗೊಳ್ಳುತ್ತಿವೆ. ಯಾರನ್ನಾದರೂ ಕಳುಹಿಸಿ ಇಸ್ಲಾಮಿನ ನೈಜ ತತ್ವಗಳು ಪುನಃ ಜಾರಿಗೊಳ್ಳುವಂತೆ ಮಾಡು ಎಂದು. ಆಗ ಅಲ್ಲಾಹನ ವಿಧಿನಿರ್ಣಯ ಪ್ರಕಾರ ಮುಹಮ್ಮದೀ ಮಸೀಹರ ಒಬ್ಬ ಸೇವಕ ಆ ಪ್ರದೇಶಕ್ಕೆ ತಲಪುತ್ತಾರೆ ಮತ್ತು ಅಲ್ಲಿನ ಜನರಿಗೆ ಇಸ್ಲಾಮ್ ಬಗ್ಗೆ ಉಪದೇಶಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ಅವರ ಮೂಲಕ ಇಸ್ಲಾಮಿನ ನೈಜ ಸ್ಥಿತಿಯನ್ನು ಅರಿತುಕೊಂಡವರಿಗೆ ಮಾತ್ರ ಇಂದು ನೈಜ ಇಸ್ಲಾಮನ್ನು ಕಲಿಸಲು ಸಾಧ್ಯವಾಗುತ್ತದೆ.

ನಮ್ಮ ಪೈಕಿ ಪ್ರತಿಯೊಬ್ಬನು ಮಾಡಬೇಕಾದ ಕೆಲಸವೇನೆಂದರೆ, ಇಸ್ಲಾಮಿನ ನೈಜ ತತ್ವಗಳನ್ನು ಲೋಕದಲ್ಲಿ ಹರಡಲು ಮತ್ತು ಪ್ರತಿಯೊಬ್ಬನಿಗೆ ಅದನ್ನು ತಲಪಿಸಲು ನೋವಿನೊಂದಿಗೆ ಪ್ರಾರ್ಥಿಸಬೇಕು ಮತ್ತು ಅದಕ್ಕೋಸ್ಕರ ಪ್ರಯತ್ನ ಸಹ ಮಾಡಬೇಕು. ಇಂದು ಅನೇಕ ಇಸ್ಲಾಮೀ ಸಂಘಗಳಿವೆ. ಸಂಘಟನೆಗಳಿವೆ. ಅನೇಕ ಗುಂಪುಗಳು ಇಸ್ಲಾಮಿನ ಹೆಸರಿನಲ್ಲಿ ಕೆಲಸ ಮಾಡುತ್ತವೆ. ತಬ್ಲೀಗೀ ಜಮಾಅತ್ ಸಹ ಇದೆ. ಆದರೆ ಪ್ರತಿಯೊಂದು ವಿಭಾಗದವರು ತಮ್ಮ ಸ್ವಂತ ಹಿತಾಸಕ್ತಿಯನ್ನು ಹೊಂದಿದ್ದಾರೆ. ವಿರೋಧದಲ್ಲಿ ಒಬ್ಬರಿನ್ನೊಬ್ಬರ ವಿರುದ್ಧ ಕುಫ್ರ್ ಫತ್ವ ನೀಡಲು ಸಹ ಸಿದ್ಧರಾಗಿದ್ದಾರೆ. ಇಂತಹ ಜನರು ಇಸ್ಲಾಮಿಗೆ ಹೇಗೆ ತಾನೆ ಸೇವೆ ಮಾಡುವರು? ಇಂದು ಇಸ್ಲಾಮಿನ ಸಂದೇಶ

ತಲಪಿಸುವ ಕೆಲಸ ಮಾಡುವವರು ಮುಹಮ್ಮದೀ ಮಸೀಹರ ಗುಲಾಮರು ಮಾತ್ರವಾಗಿದ್ದಾರೆ.

ನಮ್ಮ ಕೆಲಸಗಳನ್ನು ಅಲ್ಲಾಹನೇ ಸುಲಭಗೊಳಿಸುತ್ತಿದ್ದಾನೆ. ಕೆಲವರಿಗೆ ಸ್ವಪ್ನದ ಮೂಲಕ ಮಾರ್ಗದರ್ಶನ ನೀಡುತ್ತಾನೆ. ಇನ್ನು ಕೆಲವರಿಗೆ ಬೇರೆ ಯಾವುದಾದರೊಂದು ರೀತಿಯಲ್ಲಿ ಸತ್ಯದ ತಿಳುವಳಿಕೆ ನೀಡುತ್ತಾನೆ. ನಾವು ನಮ್ಮ ಬೈಅತ್ ಪ್ರತಿಜ್ಞೆ ಈಡೇರಿಸುವವರಾಗುವುದಾದರೆ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಹಾಯಕರಾಗಲು ಪ್ರಯತ್ನಿಸಬೇಕು. ನಾವು ಬೈಅತ್ ಮಾಡಿದ ನಂತರ ಹೇಗೆ ಆಗಬೇಕು ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

“ಬೈಅತನ್ನು ಒಂದು ಆಚಾರದ ರೂಪದಲ್ಲಿ ಮಾಡುವುದರಿಂದ ಪ್ರಯೋಜನ ಸಿಗಲಾರದು. ಇಂತಹ ಬೈಅತ್ ಮಾಡುವುದರಿಂದ ಬೈಅತ್ ಮಾಡಿದವರ ಭಾಗವಾಗುವುದು ಕಷ್ಟಕರವಾಗಿದೆ. ಯಾರನ್ನು ಬೈಅತ್ ಮಾಡಲಾಗಿದೆಯೋ ಅವರ ಭಾಗವಾಗಬೇಕಾದರೆ ತನ್ನ ಅಸ್ತಿತ್ವವನ್ನು ಕೈಬಿಟ್ಟು ಪ್ರೀತಿ ಮತ್ತು ನಿಷ್ಠೆಯಿಂದ ಅವರೊಂದಿಗೆ ಸೇರಬೇಕು. ಕಪಟ ವಿಶ್ವಾಸಿಗಳು (ಮುನಾಫಿಖ್) ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸತ್ಯವಾದ ಸಂಬಂಧ ಸ್ಥಾಪಿಸದ ಕಾರಣ ಅವರು ವಿಶ್ವಾಸ ರಹಿತರಾದರು. ಅವರಲ್ಲಿ ಸತ್ಯವಾದ ಪ್ರೀತಿ ಮತ್ತು ನಿಷ್ಠೆ ಹುಟ್ಟಲಿಲ್ಲ. ಆದುದರಿಂದ ಅವರು **ಲಾಇಲಾಹ ಇಲ್ಲಲ್ಲಾಹ್** ಎಂದು ಬಾಹ್ಯವಾಗಿ ಉಚ್ಚರಿಸಿದ್ದು ಅವರಿಗೆ ಪ್ರಯೋಜನಕರವಾಗಲಿಲ್ಲ. ಆದುದರಿಂದ ಸಂಬಂಧಗಳನ್ನು ವರ್ಧಿಸುವುದು ಆವಶ್ಯಕವಾಗಿದೆ. ಸಾಧ್ಯವಿರುವಷ್ಟು ಮಟ್ಟಿಗೆ ಮನುಷ್ಯನು ತನ್ನ ಗುರುವಿನ ಬಣ್ಣವನ್ನು ಹೊಂದಬೇಕು– ನಂಬಿಕೆಗಳಲ್ಲಿ ಮತ್ತು ಕರ್ಮಗಳಲ್ಲಿ. ಯಾರನ್ನು ನಂಬಲಾಗಿದೆಯೋ ಅವರ ಹಾಗೆ ತಾನು ಸ್ವತಃ ಆಗಲು ಪ್ರಯತ್ನಿಸಬೇಕು. ಆಯುಸ್ಸಿನ ಬಗ್ಗೆ ಯಾವುದೇ ನಿಶ್ಚಿತತೆ ಇಲ್ಲ. ಆದುದರಿಂದ ಕೂಡಲೇ ಸತ್ಯ ಸಂಧತೆ ಮತ್ತು ಆರಾಧನೆ ಕಡೆಗೆ ಬಾಗಬೇಕು. ಬೆಳಗ್ಗೆಯಿಂದ ಸಾಯಂಕಾಲ ತನಕ ನಾನು ಹೇಗೆ ಜೀವಿಸಿದೆ ಎಂದು ಪರಿಶೋಧಿಸುತ್ತಾ ಇರಬೇಕು.”

ಹೊಸದಾಗಿ ಜಮಾಅತಿಗೆ ಸೇರಿದವರ ವಿಶ್ವಾಸವನ್ನು ಅಲ್ಲಾಹನು ವರ್ಧಿಸುವವನಾಗಲಿ. ನಂಬಿಕೆ ಮತ್ತು ಅನುಷ್ಠಾನ ಕರ್ಮಗಳಲ್ಲಿ ಅವರು ಅಭಿವೃದ್ಧಿ ಹೊಂದುವವರಾಗಲಿ. ಶೈತಾನನು ಅವರನ್ನು ಎಂದೂ ದಾರಿ ತಪ್ಪಿಸುವವನಾಗದಿರಲಿ. ಅಲ್ಲಾಹನು ಅವರಿಗೆ ಸ್ಥಿರತೆಯನ್ನು ದಯಪಾಲಿಸುವವನಾಗಲಿ. ಅದೇರೀತಿ ಹಳೆಯ ಮತ್ತು ಜನ್ಮ ಮೂಲಕ ಅಹ್ಮದಿಯರಾದ ನಮ್ಮನ್ನು ಸಹ ವಿಶ್ವಾಸದಲ್ಲಿ ವರ್ಧಿಸುವಂತೆ ಅಲ್ಲಾಹನು ಮಾಡಲಿ. ಪ್ರತಿ ಸಮಯದಲ್ಲಿ ಅದರಲ್ಲಿ ಪ್ರಕಾಶವನ್ನು ಹುಟ್ಟುವಂತೆ ಮಾಡಲಿ. ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಮುಂದುವರಿಯಲು ನಮಗೆ ಭಾಗ್ಯ ನೀಡಲಿ. ಹೊಸದಾಗಿ ಆಗಮಿಸುವವರಿಗೆ ನಾವು ದಾರಿ ತಪ್ಪಿಸಲು ಕಾರಣವಾಗದಿರಲಿ. ನಾವು ಯಾವಾಗಲೂ ಲೋಕಕ್ಕೆ ನೇರಮಾರ್ಗ ತೋರಿಸುವವರಾಗಲಿ. ನಾವು ಹಳೆಯ ಅಹ್ಮದಿಯರೆಂದು ಕೇವಲ ಸಂತೋಷ ಪಡುವವರಾಗದೆ ಬೈಅತ್‌ನ ಉದ್ದೇಶ ಲಕ್ಷ್ಯಗಳನ್ನು ಈಡೇರಿಸುವವರಾಗುವ ಭಾಗ್ಯ ಲಭಿಸಲಿ. ಲೌಕಿಕ ಸಾಮಗ್ರಿಗಳ ಗಳಿಕೆ ನಮ್ಮ ಉದ್ದೇಶಲಕ್ಷ್ಯವಾಗದಿರಲಿ. ನಮ್ಮ ಉದ್ದೇಶಲಕ್ಷ್ಯ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದಾಗಲಿ. ನೈಜ ಇಸ್ಲಾಮ್ ಲೋಕದಲ್ಲಿ ಬೇಗನೆ ಹರಡುವುದನ್ನು ನಾವು ಕಾಣುವಂತಾಗಲಿ. ಲೋಕವು ಇಂದು ಯಾವುದನ್ನು ಹಾನಿಕರವೆಂದು ಭಾವಿಸಿದೆಯೋ ಅದುವೇ ಅವರ ಮೋಕ್ಷದ ಯಥಾರ್ಥ ಮಾರ್ಗವಾಗಿದೆ ಎಂದು ಲೋಕಕ್ಕೆ ತಿಳಿಸಿಕೊಡುವ ಭಾಗ್ಯ ನಮಗೆ ಲಭಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 10-02-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon